


ಸಚ್ಚಿದಾನಂದ ಹೆಗಡೆ



ಬೆಳಗಿನ ವ್ಯಾಯಾಮ, ಪೂಜೆಗಳನ್ನೆಲ್ಲಾ ಎಂದಿಗಿಂತ ಮೊದಲೇ ಮುಗಿಸಿ, ಆಗಷ್ಟೇ ಬಂದ ದಿನಪತ್ರಿಕೆ ತಿರುವುತ್ತಾ, ತಿಂಡಿ ಆಯಿತಾ? ತಿಂಡಿ ಆಯಿತಾ? ಎಂದು ಊರಿಗೆಲ್ಲಾ ಕೇಳುವ ಹಾಗೆ ಕೂಗುತ್ತಾ ಹೊರಗೆ ಕೂತ ರಿಟಾಯರ್ಡ್ ಮಾಸ್ತರ ನರಸಿಂಹ ಜೋಶಿಯವರಿಗೆ ಯಾವುದೇ ಆಶಾದಾಯಕವಾದ ಪ್ರತಿಕ್ರಿಯೆ ಹೆಂಡತಿ ಗಂಗಕ್ಕನಿಂದ ಬರಲಿಲ್ಲ. ಚಾಮರಾಜ ಪೇಟೆಯ ಹೈಗರ ಬೀದಿಯಲ್ಲಿ ಇನ್ನೆಷ್ಟು ರಿಟಾಯರ್ಡ್ ಮಂದಿ ಈ ರೀತಿ ಬೆಳಿಗ್ಗೆ ಕೂಗುತ್ತಾರೋ! ಮೂವತ್ತು ವರುಷದಿಂದ ಇದನ್ನೇ ಕೇಳಿದರೂ ಇಂದು ಯಾಕೆ ನನಗೆ ಹೀಗನಿಸಬೇಕಿತ್ತು ಎಂದುಕೊಂಡಳು ಗಂಗಕ್ಕ. ಮಾಸ್ತರರು ಕೂಗುವುದಕ್ಕೂ, ಅದು ಹೆಂಡತಿಗೆ ಕೇಳದೇ ಇರುವುದಕ್ಕೂ ಇಂದು ಮಾತ್ರ ಕಾರಣ ಒಂದೇ ಇತ್ತು. ಒಂದೂವರೆ ವರುಷದಿಂದ ಅಜ್ಜ ಅಜ್ಜಿ ನೋಡದೇ ಇರದ ಮೊಮ್ಮಕ್ಕಳು ಮನೆಗೆ ಬರುವುದು... ಅಜ್ಜ ಬೇಗ ಎದ್ದು ತನ್ನೆಲ್ಲ ಕೆಲಸ ಮುಗಿಸಿ ತಿಂಡಿಗಾಗಿ ಕಾಯುತ್ತಿದ್ದರೆ, ಅಜ್ಜಿ ಮಧ್ಯಾಹ್ನದ ಊಟಕ್ಕೆ ಬೆಳಗಿನಿಂದಲೇ ಅಡುಗೆಗೆ ತೊಡಗಿದ್ದಳು.

ಗಂಟೆ ಎಂಟಾಗಿರಲಿಲ್ಲ, ಮತ್ತೆ ಅದೇ ಕರೆ. ನಾಲ್ಕು ದಿವಸದಿಂದ ಏನಿಲ್ಲವೆಂದರೂ ಕನಿಷ್ಠ ಹತ್ತು ಬಾರಿಯಾದರೂ ಮೊಬೈಲ್ ಕರೆಮಾಡಿ, 'ಸರ್, ನಮ್ಮ ಆಂಗ್ಲ ಚಾನಲ್‌ನ ಡಿಬೇಟ್‌ಗೆ ನೀವು ಬರಲೇ ಬೇಕು. ಎಲ್ಲವೂ ರೆಡಿಯಾಗಿದೆ, ನೀವು ಒಪ್ಪಲೇಬೇಕು, ಈಗಾಗಲೇ ರಾಷ್ಟ್ರೀಯ ಸುದ್ದಿಯಾಗಿ ಹೋದ ಈ ವಿಷಯವನ್ನು ಇಷ್ಟು ಆಳವಾಗಿ ನಾವೇ ಮೊದಲು ಕವರ್ ಸ್ಟೋರಿ ಮಾಡಬೇಕು' ಎಂದು ಆ ಕಡೆಯಿಂದ ಪ್ರೀತಮ್ ದತ್ತ ಹೇಳುತ್ತಲೇ ಇದ್ದರು. ಅದಕ್ಕೆ ನಾಲ್ಕು ದಿವಸದಿಂದ ಮಾಸ್ತರರ ಒಂದೇ ಉತ್ತರ –'ಇಲ್ಲಪ್ಪ, ಆ ದಿವಸ ನನ್ನ ಮೊಮ್ಮಕ್ಕಳು ಬರುತ್ತಿದ್ದಾರೆ' ಎಂದು. ದತ್ತ ಮತ್ತು ಮಾಸ್ತರರ ಸಂಭಾಷಣೆಯನ್ನು ನಾಲ್ಕು ದಿವಸದಿಂದ ಕೇಳಿ ಕೇಳಿ ಸಾಕಾದ ಗಂಗಕ್ಕ, ಅಡುಗೆ ಮನೆಯಿಂದಲೇ 'ಬರುತ್ತೇನೆ ಎಂದು ಹೇಳಿ, ಅರ್ಧ ಗಂಟೆಯಲ್ಲಿ ಏನು ಕಡಿದು ಕಾಟ್ಟೆಹಾಕುವುದಿದೆ, ಮೊಮ್ಮಕ್ಕಳೇನು ಇಂದೇ ಓಡಿಹೋಗುತ್ತಿಲ್ಲವಲ್ಲ!' ಎಂದು ಹೇಳಿ ಮಾಸ್ತರರನ್ನು ಒಪ್ಪಿಸಿಬಿಟ್ಟಳು. 'ಇಪ್ಪತ್ತು ವರುಷದಿಂದ ನಾನು ಈ ಕೆಲಸದಲ್ಲಿ ತೊಡಗಿದ್ದೇನೆ. ಇದೇನು ನನಗೆ ಹೊಸತಲ್ಲ' ಎಂದು ಗೊಣಗುತ್ತಾ ಮಾಸ್ತರರು ಹೊರನಡೆದರು.